

## ಪುಷ್ಪದಳದ ಮೇಲೊಂದು ಕೋರಿಕೆ

ದೇವರಿಗೆ ಪುಷ್ಪಗಳನ್ನು ಅರ್ಪಿಸಿ ತಮ್ಮ ತಮ್ಮ ಮನೋಭಿಲಾಷೆಯನ್ನು ಈಡೇರಿಸಲು ಕೋರಿಕೊಳ್ಳುವುದು ಸರ್ವೇ ಸಾಮಾನ್ಯ. ಕೆಲ ದಿನಗಳ ಹಿಂದೆ ಸಾಗರದ ಮಹಾಗಣಪತಿ ದೇವಸ್ಥಾನಕ್ಕೆ ಹೋಗಿದ್ದೆ. ಅಲ್ಲಿನ ಅರ್ಚಕರು ನೀಡಿದ ಹೂವಿನ ಪ್ರಸಾದವನ್ನು ನೋಡಿ, ಹೀಗೂ ದೇವರ ಬಳಿ ಕೋರಿಕೆಗಳನ್ನು ತಲುಪಿಸಬಹುದೇ? ಎಂದು ಆಶ್ಚರ್ಯವಾಯಿತು. ಭಕ್ತರೊಬ್ಬರು ಬಿಳಿಗುಲಾಬಿ ಹೂವಿನ ದಳಗಳ ಮೇಲೆ ‘ಪ್ಲೀಸ್ ಹೆಲ್ಪ್ ಮೀ ಟು ಫೋಕಸ್’ ಮತ್ತು ‘ಪ್ಲೀಸ್ ರಿವಾರ್ಡ್ಸ್ ಮೈ ಹಾರ್ಡ್‌ವರ್ಕ್’ ಎಂದು ಬರೆದು ತಮ್ಮ ಆಶೋತ್ತರಗಳನ್ನು ಈಡೇರಿಸಲು ಬಿನ್ನವತ್ತಳಿಸಿಕೊಂಡಿದ್ದಾರೆ. ದಳಗಳು ಹಾಳಾಗದಂತೆ, ಅವುಗಳ ಮೇಲೆ ಅಷ್ಟು ನೀಟಾಗಿ ಬರೆದು ಅದನ್ನು ದೇವರಿಗೆ ಸಮರ್ಪಿಸಿದ ಪರಿಗೆ ಮೆಚ್ಚುಗೆ ಸಲ್ಲಿಸಲೇಬೇಕು.

—ಅಂಜನ್ ಕಾಯ್ಕಿಣಿ, ಸಾಗರ





## ಸಗಣಿಹುಳುಗಳ ಸಾಹಸಗಾಥೆ

ಸಣ್ಣ ಗಾತ್ರದ ಸಗಣಿಹುಳುಗಳು ಸಂತಾನ ಮತ್ತು ಆಹಾರಕ್ಕಾಗಿ ಪ್ರಾಣಿಗಳ ಮಲವನ್ನೇ ದುಂಡನೆಯ ಉಂಡೆಯನ್ನಾಗಿ ಮಾಡಿಕೊಂಡು ಸುರಕ್ಷಿತವಾದ ಸ್ಥಳದಲ್ಲಿ ತಾವು ಮಾಡಿಕೊಂಡಿರುವ ಬಿಲದೊಳಕ್ಕೆ ಕೊಂಡೊಯ್ಯುತ್ತವೆ. ತಮ್ಮ ದೇಹಗಾತ್ರದ ಹತ್ತಾರು ಪಟ್ಟು ದೊಡ್ಡದಾದ ಹಾಗೂ ತಮಗಿಂತಲೂ ಹಲವು ಪಟ್ಟು ತೂಕವಿರುವ ಸಗಣಿ ಅಥವಾ ಮಲದ ಉಂಡೆಯನ್ನು ನಿರಾಯಾಸವಾಗಿ ತಳ್ಳಿಕೊಂಡು ಸಾಗುವ ಈ ಹುಳುಗಳ ತಂತ್ರಗಳು ಸೋಜಿಗವೆನಿಸುತ್ತವೆ. ಈ ಸಗಣಿ ಅಥವಾ ಮಲದಲ್ಲಿ ತಾವು ಮೊಟ್ಟೆಗಳನ್ನಿಟ್ಟು ಕಾಪಾಡಿಕೊಳ್ಳುವುದು ಸಗಣಿಹುಳುಗಳ ಉದ್ದೇಶವಾಗಿರುತ್ತದೆ. ನಿರ್ದಿಷ್ಟ ಸಮಯದ ನಂತರ ಮೊಟ್ಟೆ ಒಡೆದು ಹೊರಬರುವ ಮರಿಗಳಿಗೆ ಈ ಸಗಣಿ ಉಂಡೆಯೇ ಆಹಾರವಾಗುತ್ತದೆ. ಆ ಮರಿಹುಳುಗಳು ಸಗಣಿಯಲ್ಲಿರುವ ಪೋಷಕಾಂಶಗಳನ್ನೇ ತಿಂದು ಜೀರ್ಣಿಸಿಕೊಂಡು ಬೆಳೆದು ದೊಡ್ಡದಾಗುವುದು ವಿಸ್ಮಯ.

—ಪ.ನಾ. ಹಳ್ಳಿ ಹರೀಶ್ ಕುಮಾರ್, ತುಮಕೂರು

## ಮಕ್ಕಳಿಗೆ ಕಲಿಸಲು ಅಕ್ಷರಗಳ ಹಾಸು

ಇದು ಯಾವುದೋ ಗೋಡೆಗೆ ತೂಗು ಹಾಕುವ ಚಿತ್ರಪಟವಲ್ಲ. ಮಕ್ಕಳಿಗಾಗಿ ಸಿದ್ಧಪಡಿಸಿದ, ಬಟ್ಟೆಯಿಂದ ಮಾಡಿದ ಮೆತ್ತನೆಯ ಹಾಸು. ಒಂದು ರೀತಿಯಲ್ಲಿ ಬಟ್ಟೆಯ ಚಾಪೆ. ಇದರ ಮೇಲೆ ಒಂದು ಕಡೆಗೆ ಇಂಗ್ಲಿಷ್ ಅಕ್ಷರಗಳಿದ್ದರೆ, ಮತ್ತೊಂದು ಕಡೆ ಪ್ರಾಣಿಗಳ ಚಿತ್ರಗಳು, ಕಾರ್ಟೂನ್‌ಗಳು ಇವೆ. ಮಕ್ಕಳಿಗೆ ತಿಳುವಳಿಕೆ ಕಲಿಸುವ ಸಲುವಾಗಿ ಈ ರೀತಿಯ ಚಾಪೆ ತಯಾರಿಸಲಾಗಿದೆ. ಈಚೆಗೆ ಮಾರುಕಟ್ಟೆಯಲ್ಲಿ ಇಂತಹ ನೆಲಹಾಸುಗಳು, ಬೆಡ್‌ಶೀಟ್‌ಗಳು ಕಾಣಿಸಿಕೊಳ್ಳುತ್ತಿವೆ. ಇದು ಪ್ಲಾಸ್ಟಿಕ್ ಅಲ್ಲವಾದ್ದರಿಂದ ಮಕ್ಕಳಿಗೆ ಒಳಿತು. ಬೆಂಗಳೂರಿನ ಅಕ್ಕನ ಮನೆಯಲ್ಲಿ ಈ ಚಾಪೆ ನೋಡಿ ಆಶ್ಚರ್ಯವಾಯಿತು. ಮಗು ಮಲಗುವಾಗ ಹಾಸಿನ ಮೇಲಿನ ಚಿತ್ರಗಳು ಹಾಗೂ ಅಕ್ಷರಗಳನ್ನು ನೋಡಿ ಅವುಗಳೊಂದಿಗೆ ಆಟವಾಡುತ್ತದೆ. ಎ, ಬಿ, ಸಿ, ಡಿ ಅಂತ ಹೇಳುವುದನ್ನು ನೋಡಿದಾಗ ಇದು ನಿಜಕ್ಕೂ ಉಪಯೋಗಕಾರಿ ನೆಲಹಾಸು ಅನಿಸಿತು.

—ನಿಂಗಮ್ಮ ಭಾವಿಕಟ್ಟಿ, ಹುನಗುಂದ

